**<u>IN THE COURT OF THE SENIOR CIVIL JUDGE AND JMFC, TIPTUR.</u>**

**OS No. 27/2022**

**DW-1**

## <u>Oath is Administered to the Witness on 19.02.2026.</u>

## <u>Cross examination by: Sri. B.S Counsel for Plaintiff:</u>

ವನಾನು 7ನೇ ತರಗತಿವರೆಗೆ ಓದಿದ್ದೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ಪ್ರತಿವಾದಿಯು ನನ್ನ ಗಂಡನಾಗಿದ್ದಾನೆ. ಆತನ ವಿರುದ್ಧ ಆತನ ಸಹೋದರನ ಹೆಂಡತಿ ಈ ದಾವೆ ಹಾಕಿದ್ದಾಳೆ. ಭಾಗಕ್ಕಾಗಿ ಈ ದಾವೆ ಹಾಕಿದ್ದಾರೆ. ದಾವಾ ಆಸ್ತಿಗಳು ಗೊರಗೊಂಡನಹಳ್ಳಿಯಲ್ಲಿವೆ. ನಮ್ಮ ಕುಟುಂಬಕ್ಕೆ ಒಟ್ಟು 45 ಗುಂಟೆ ಜಮೀನು ಇದೆ. ಒಂದು ನಿವೇಶನ ಮತ್ತು 2 ಮನೆಗಳು ಇವೆ. ಜಮೀನಿನ ಸರ್ವೆ ನಂಬರ್ ಗಳು ನನಗೆ ನಿಖರವಾಗಿ ಹೇಳು ಬರುವುದಿಲ್ಲ. ನಿವೇಶನದ ವಿಸ್ತೀರ್ಣ ನನಗೆ ಗೊತ್ತು. ಮನೆಗಳ ಅಳತೆ ಸಹ ನನಗೆ ಗೊತ್ತು. ನನ್ನ ಮದುವೆಯು 1989 ರಲ್ಲಿ ಆಗಿರುತ್ತದೆ. ನನ್ನ ಮತ್ತು ನನ್ನ ಗಂಡನ ಕುಟುಂಬದ ಸಂಬಂಧ ಹಳೆಯ ಸಂಬಂಧ ಆಗಿತ್ತು. ನನ್ನ ಮಾವನವರ ಸ್ವಂತ ಊರು ಗೊರಗೊಂಡನಹಳ್ಳಿ. ನನ್ನ ಮಾವ ಚಿಕ್ಕಬಸವಯ್ಯನವರಿಗೆ ಅವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿದ್ದು ಅದರಂತೆ ದಾವಾ ಆಸ್ತಿಗಳು ಬಂದಿದ್ದವು. ನನ್ನ ಮಾವ ಚಿಕ್ಕಬಸವಯ್ಯ ಕೊಬ್ಬರಿ ಮಂಡಿಯಲ್ಲಿ ಅಮಾಲಿ ಕೆಲಸ ಮಾಡುತ್ತಿದ್ದರು. 20 ಗುಂಟೆ ಜಮೀನು ನನ್ನ ಗಂಡ ಎಂದರೆ ಪ್ರತಿವಾದಿ ಹೆಸರಿನಲ್ಲಿದೆ. ಉಳಿದ 25 ಗುಂಟೆ ಜಮೀನು ವಾದಿ 1 ಮತ್ತು ಪ್ರತಿವಾದಿಯ ಹೆಸರಿನಲ್ಲಿದೆ. ನನ್ನ ಗಂಡನಿಗೆ 20 ಗುಂಟೆ ಜಮೀನು ಬಂದಿದೆ ಎಂದು ಹೇಳಿದ್ದು ಅದು ಆತನ ತಾಯಿ ಬರೆದುಕೊಟ್ಟಿರುತ್ತಾಳೆ. ನನ್ನ ಅತ್ತೆಗೆ ಆ ಜಮೀನು ತವರು ಮನೆಯಿಂದ ಬರೆಸಿಕೊಟ್ಟಿದ್ದರು. ಅದಕ್ಕೂ ಮೊದಲು ಸದರಿ 20 ಗುಂಟೆ ಜಮೀನು

ನಮ್ಮ ಮಾವ ಚಿಕ್ಕಬಸಯ್ಯನವರ ಹೆಸರಿನಲ್ಲಿತ್ತು. ಅದನ್ನು ನನ್ನ ಅತ್ತೆಯು ನನ್ನ ಗಂಡನ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಸದರಿ 20 ಗುಂಟೆ ಜಮೀನು ನನ್ನ ಮಾವ ಚಿಕ್ಕಬಸವಯ್ಯನವರು ಆತನ ಹೆಂಡತಿ ಮತ್ತು ಅವರ ಇಬ್ಬರು ಮಕ್ಕಳ ಹೆಸರಿಗೆ ಬರೆದುಕೊಟ್ಟಿದ್ದರು ಎಂದರೆ ನಿಜ. ನನ್ನ ಮಾವನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು. ಆ ರೀತಿ ಮದ್ಯಪಾನ ಮಾಡುವ ಅಭ್ಯಾಸ ಇದ್ದ ಕಾರಣ ಆತ ಜಮೀನು ಮಾರಾಟ ಮಾಡಿ ಹಾಳು ಮಾಡುತ್ತಾನೆ ಎಂದು ನನ್ನ ಅತ್ತೆ ಆಕೆಯ ಹೆಸರಿಗೆ ಮತ್ತು ಆಕೆಯ ಮಕ್ಕಳ ಹೆಸರಿಗೆ ಮಾಡಿಸಿಕೊಂಡಿದ್ದಳು ಎಂದರೆ ನಿಜ. ಆ ರೀತಿ 1977 ರಲ್ಲಿ ನನ್ನ ಮಾವ ಆ ಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ನಿಜ. ನನ್ನ ಮಾವ ಸುಮಾರು 17 ರಿಂದ 19 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಜಮೀನು ನನ್ನ ಅತ್ತೆಯ ಹೆಸರಿಗೆ ಬರೆದುಕೊಟ್ಟರೂ ಸಹ ನನ್ನ ಮಾವ ನನ್ನ ಅತ್ತೆ ಮತ್ತು ನನ್ನ ಗಂಡ ಹಾಗೂ 1 ನೇ ವಾದಿಯ ಗಂಡ ಜೊತೆಯಲ್ಲಿಯೇ ಆ ಜಮೀನು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ನಿಜ.

ನನಗೆ ಮತ್ತು 1 ನೇ ವಾದಿಯ ನಡುವೆ ಹೊಂದಾಣಿಕೆ ಇಲ್ಲದೇ ಇದ್ದ ಕಾರಣ ನಾವು ಬೇರೆ ಬೇರೆ ಮನೆಗಳಲ್ಲಿ ವಾಸ ಇದ್ದೆವು ಆದರೆ ಜಮೀನುಗಳಲ್ಲಿ ಒಟ್ಟಿಗೆ ಅನುಭವ ಹೊಂದಿದ್ದೆವು ಎಂದರೆ ನಿಜ. ನಾನು ನನ್ನ ಅತ್ತೆಯು ನನ್ನ ಗಂಡನಿಗೆ ಜಮೀನು ಮಾಡಿಕೊಟ್ಟಿದ್ದಾರೆ ಎಂದು ಹೇಳಿದ್ದು ಅವರು ದಾನಪತ್ರ ಬರೆದು ಕೊಟ್ಟಿದ್ದಾರೆ. 2016 ರಲ್ಲಿ ಆ ರೀತಿ ದಾನಪತ್ರ ಬರೆದುಕೊಟ್ಟಿದ್ದಾರೆ. 1 ನೇ ವಾದಿಯ ಗಂಡ ಖಾಯಿಲೆ ಬಿದ್ದಿದ್ದನು. ಆತನ ಚಿಕಿತ್ಸೆಗಾಗಿ ಹಣ ಕೊಟ್ಟಿದ್ದೆ ಎಂದು ಹೇಳಿದ್ದು 5 ಲಕ್ಷ ಹಣ ಕೊಟ್ಟಿದ್ದೆವು. ಅದು ಯಾವಾಗ ಮತ್ತು ಎಲ್ಲಿ ಕೊಟ್ಟಿದ್ದೆವು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಆತ ನಮ್ಮ ಮನೆಗೆ ಬಂದು ಪಡೆದುಕೊಂಡು ಹೋಗಿದ್ದನೋ ಅಥವಾ ನಾವು ಆತನ ಮನೆಗೆ ಹೋಗಿ ಹಣ ಕೊಟ್ಟಿದ್ದೆವು ಎಂದು ಹೇಳಲು ಆಗುವುದಿಲ್ಲ. ನಾವು ಆ ರೀತಿ ಹಣ ಕೊಟ್ಟ ಬಗ್ಗೆ ಯಾರೂ ಸಾಕ್ಷಿ ಇರಲಿಲ್ಲ. ಬೇರೆ ಯಾರೂ ಸಹ ಆ ಸಮಯದಲ್ಲಿ ಇರಲಿಲ್ಲ. ಯಾರಿಗೂ ಸಹ ನಾವು ಆ ರೀತಿ

ಹಣ ಕೊಟ್ಟ ಬಗ್ಗೆ ಹೇಳಿಲ್ಲ.

ಬಾಯಿ ಮಾತಿನಲ್ಲಿ ಪಾರಿಕತ್ ಮಾಡಿಕೊಂಡಿದ್ದೆವು ಎಂದು ಹೇಳಿದ್ದು ಸುಮಾರು 7-8 ವರ್ಷಗಳ ಹಿಂದೆ ಆ ರೀತಿ ಪಾರಿಕತ್ ಮಾಡಿಕೊಂಡಿದ್ದೆವು. ಆ ರೀತಿ ಪಾರಿಕತ್ ಆಗಿದೆ ಎಂದು ಹೇಳಿದ್ದು ಆ ಸಮಯದಲ್ಲಿ ಊರಿನವರಾಗಲೀ ಅಕ್ಕಪಕ್ಕದವರಿಗಾಗಲೀ ಅಥವಾ ನಮ್ಮ ಸಂಬಂಧಿಕರಿಗಾಗಲೀ ಸೇರಿಸಿರಲಿಲ್ಲ. ಆ ರೀತಿ ಕರೆಯಲು ಏನೂ ತೊಂದರೆ ಇರಲಿಲ್ಲ. 2 ನೇ ವಾದಿಯ ಮದುವೆಯು 2020 ರಲ್ಲಿ ಆಗಿತ್ತು. ನಾನು ಮದುವೆಗೆ ಹೋಗಿದ್ದೆ. ಆಕೆಯ ಮದುವೆಯ ಸಮಯದಲ್ಲಿ ನಾವು ಮತ್ತು ವಾದಿಯರು ಚೆನ್ನಾಗಿದ್ದೆವು. ನನ್ನ ಗಂಡ ಕೊಬ್ಬರಿ ಅಂಗಡಿಯಲ್ಲಿ ಕೊಬ್ಬರಿ ಚೂರು ಮತ್ತು ಕೌಟು ವ್ಯಾಪಾರ ಮಾಡುತ್ತಿದ್ದರು. ಈಗ 4-5 ವರ್ಷಗಳಿಂದ ಆ ವ್ಯಾಪಾರ ಮಾಡುತ್ತಿಲ್ಲ. ಆತನಿಗೆ ಕಣ್ಣು ಕಾಣಿಸುವುದಿಲ್ಲ ಮತ್ತು ಬಿ.ಪಿ ಮತ್ತು ಶುಗರ್ ಜಾಸ್ತಿ ಇರುವುದರಿಂದ ಆತ ವ್ಯಾಪಾರ ಬಿಟ್ಟಿರುತ್ತಾನೆ ಎಂದು ಹೇಳುತ್ತಾರೆ. ನನ್ನ ಗಂಡನಿಗೆ ಬ್ಯಾಂಕಿನಲ್ಲಿ ಖಾತೆ ಇತ್ತು. ನನ್ನ ದೊಡ್ಡಮಗಳ ಸುಮಾರು 14 ವರ್ಷಗಳ ಹಿಂದೆ ಮತ್ತು ಚಿಕ್ಕ ಮಗಳ ಮದುವೆಯನ್ನು ಸುಮಾರು 6 ವರ್ಷಗಳ ಹಿಂದೆ ಮಾಡಿದ್ದೇವೆ. ನಮ್ಮ ಮಕ್ಕಳ ಮದುವೆ ನಾವೇ ಮಾಡಿದ್ದೆವು. ದೊಡ್ಡ ಮಗಳು ಪ್ರೇಮ ವಿವಾಹ ಆಗಿದ್ದಳು. 2 ನೇ ಮಗಳ ಮದುವೆಗೆ ಸುಮಾರು 10 ಲಕ್ಷ ಹಣ ಖರ್ಚು ಮಾಡಿದ್ದೆವು. ಆ ಮದುವೆಯು ಸಾಲ ಸೂಲ ಮಾಡಿ ಮಾಡಿದ್ದೆವು. 2 ನೇ ವಾದಿಯ ಮದುವೆಗೆ ನಾವು ಯಾವುದೇ ಹಣ ಕೊಟ್ಟಿಲ್ಲ ಎಂದರೆ ನಿಜ. ನಾನು 2 ನೇ ವಾದಿಯ ಮದುವೆಗೆ 5 ಲಕ್ಷ ರೂ. ಹಣ ಕೊಟ್ಟಿದ್ದೆವು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ದಾನಪತ್ರ ಬರೆದುಕೊಡಲು ಅಧಿಕಾರ ಇಲ್ಲದೇ ಇದ್ದರೂ ಸಹ ಆಕೆಗೆ ಸುಳ್ಳು ಹೇಳಿ ಅಕ್ರಮವಾಗಿ ಆಕೆಯ ಕಡೆಯಿಂದ ದಾವಾ ಐಟಂ ನಂ. 3 ಸ್ವತ್ತಿನ್ನು ದಾನಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ವಾದಿಯ ಗಂಡ ಆರೋಗ್ಯ ಸಮಸ್ಯೆದಿಂದ ನರಳುತ್ತಿದ್ದ ಮತ್ತು ಅದನ್ನು ದುರುಪಯೋಗ ಮಾಡಿಕೊಂಡು ಆತನಿಗೆ ಗೊತ್ತಿಲ್ಲದ ಹಾಗೆ ನಾವು ಎಲ್ಲರೂ ಸೇರಿಕೊಂಡು ನಮ್ಮ

ಅತ್ತೆಯ ಕಡೆಯಿಂದ ಆ ರೀತಿ ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ನಿವೇಶನವು ನನ್ನ ಮಾವನ ಹೆಸರಿನಲ್ಲಿಯೇ ಇದೆ. ನಾನು ಹೇಳಿದಂತೆ ನಾವು ಯಾವುದೇ ಬಾಯಿ ಮಾತಿನ ಭಾಗ ಮಾಡಿಕೊಂಡಿಲ್ಲ ಮತ್ತು ನಾನು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಆ ರೀತಿ ಭಾಗ ಮಾಡಿಕೊಂಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಯಾರೂ ಇಲ್ಲ ಎಂದು ತಿಳಿದುಕೊಂಡು ಅವರಿಗೆ ನಾವು ತೊಂದರೆ ಕೊಟ್ಟುಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ತೋಟದಲ್ಲಿ ಬೆಳೆಯುವ ತೆಂಗಿನ ಕಾಯಿಗಳು ನಾವು ಮತ್ತು ವಾದಿಯರು ತೆಗೆದುಕೊಂಡು ಹೋಗುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಲ್ಲಿ ವಾದಿಯರು ಸಹ ಜಂಟಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಅರ್ಧ ಹಿಸ್ಸೆ ಕೊಡಲು ತಕರಾರು ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮಗೆ 25 ಗುಂಟೆ ಜಮೀನು ಬರಬೇಕು ಎಂದು ಹೇಳುತ್ತಾರೆ. ವಾದಿಯರು ವಾಸ ಇದ್ದ ಮನೆ ಪಾಳು ಬಿದ್ದಿದೆ ಎಂದರೆ ನಿಜ. ವಾದಿಯರಿಗೆ ಹಿಸ್ಸೆ ಕೊಡಲು ನನ್ನ ಗಂಡನಿಗೆ ಯಾವುದೇ ತಕರಾರು ಇಲ್ಲದೇ ಇದ್ದರೂ ಸಹ ನಾನು ಆತನನ್ನು ನ್ಯಾಯಾಲಯಕ್ಕೆ ಬರಲು ಬಿಡದೆ ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸ್ವತಃ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಮ್ಮ ಕುಟುಂಬದಲ್ಲಿ ಯಾವುದೇ ಬಾಯಿ ಮಾತಿನ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂ. 3 ರ ಜಮೀನಿಗೆ ದಾನಪತ್ರ ಬರೆದುಕೊಡಲು ನನ್ನ ಅತ್ತೆಗೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ನಾವೆಲ್ಲರೂ ಕೂಡಿ ಸುಳ್ಳು ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ 1 ರವರ ಗಂಡನಿಗೆ ಆರೋಗ್ಯ ಸಮಸ್ಯೆ ಇದ್ದ ಸಮಯದಲ್ಲಿ 5 ಲಕ್ಷ ಹಣ ಕೊಟ್ಟಿದ್ದೆವು ಮತ್ತು 2 ನೇ ವಾದಿಯ ಮದುವೆ 5 ಲಕ್ಷ ಹಣ ಕೊಟ್ಟಿದ್ದೆವು ಎಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>Further cross examination is deferred on request</u>**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR